

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸಿಲಿಕಾನ್ ವ್ಯಾಲಿಯಲ್ಲಿ e-ವಚನಾಂಜಲಿ

ತಂತ್ರಜ್ಞಾನ ಬೆಳೆದಂತೆ ಜಗತ್ತು ಸಂಕುಚಿತಗೊಳ್ಳುತ್ತಿದೆ. ವಿಭಿನ್ನ ಧರ್ಮ-ಸಂಸ್ಕೃತಿಗಳ ಜನರು ದೇಶ-ಭಾಷೆಗಳ, ಪ್ರಾಂತ್ಯ-ಪ್ರದೇಶಗಳ ಗಡಿಬಾಂದುಗಳನ್ನು ಕೆಲವೇ ಗಂಟೆಗಳಲ್ಲಿ ದಾಟಿ ಪರಸ್ಪರ ಸಂಧಿಸುವ, ನೇರವಾಗಿ ವಿಚಾರ ವಿನಿಮಯ ಮಾಡಿಕೊಳ್ಳುವ ವಿಶೇಷ ಕ್ಷಮತೆಯನ್ನು ಪಡೆದಿದ್ದಾರೆ. ಶತಮಾನದ ಹಿಂದೆ ಸ್ವಾಮಿ ವಿವೇಕಾನಂದರು ಅಮೇರಿಕೆ ತಲುಪಲು ತಿಂಗಳುಗಟ್ಟಳೆ ಹಡಗಿನಲ್ಲಿ ಪ್ರಯಾಸದ ಪ್ರಯಾಣವನ್ನು ಮಾಡಬೇಕಾಯಿತು. ಈಗ ಕಾಲ ಹಾಗಿಲ್ಲ. ಬೆಳಗ್ಗೆ ಉಪಾಹಾರ ಸ್ವೀಕರಿಸಿ ಬೆಂಗಳೂರಿನಿಂದ ವಿಮಾನ ಹತ್ತಿದರೆ ಲಂಡನ್‍ನಲ್ಲಿ ಮಧ್ಯಾಹ್ನದ ಭೋಜನ ಮುಗಿಸಿ ಸಂಜೆ ವೇಳೆಗೆ ಅಮೆರಿಕೆಯಲ್ಲಿ ನಿಮ್ಮ ಆಪ್ತೇಷ್ಟರ ಮನೆಯ ಔತಣಕೂಟದಲ್ಲಿ ಭಾಗಿಯಾಗಬಹುದು. ಮರುದಿನವೇ ಸ್ವಸ್ಥಾನಕ್ಕೆ ಹಿಂದಿರುಗಬಹುದು. ಹಿಂದೆ ರಾಜಮಹಾರಾಜರಿಗೂ ಇಲ್ಲದ ಸೌಲಭ್ಯಗಳು ಆಧುನಿಕ ದಿನಮಾನದಲ್ಲಿ ಶ್ರೀಸಾಮಾನ್ಯನಿಗೂ ದೊರಕುವಂತಾಗಿದೆ. ಹೀಗೆ ವಿಶಾಲ ಜಗತ್ತು ಸಂಕುಚಿತಗೊಂಡಂತೆ ಅದೇ ತಂತ್ರಜ್ಞಾನದ ಕಾರಣದಿಂದ ಹಿಂದಿನ ಕಾಲದವರ ಅನುಭವದ ಮಾತುಗಳೂ ಆಕುಂಚನಗೊಳ್ಳುವಂತಾಗಿದೆ. ಉದಾಹರಣೆಗೆ ಈ ಮುಂದಿನ ಸಂಸ್ಕೃತ ಸುಭಾಷಿತವನ್ನು ಗಮನಿಸಿ:

> **ಪುಸ್ತಕಂ ವನಿತಾ ವಿತ್ತಂ ಪರ-ಹಸ್ತಗತಂ ಗತಂ ।**
> **ಯದಿ ವಾ ಪುನರಾಯಾತಂ ಜೀರ್ಣಂ ಭ್ರಷ್ಟಾ ಚ ಖಂಡಶಃ ॥**

'ಪುಸ್ತಕ, ಹೆಣ್ಣು ಮತ್ತು ಹಣ ಪರರ ಕೈಗೆ ಹೋದರೆ ಹೋದಂತೆಯೇ. ಒಂದು ವೇಳೆ ವಾಪಾಸು ಬಂದರೂ ಅವು ಮೊದಲಿನ ಸ್ಥಿತಿಯಲ್ಲಿ ಇರುವುದಿಲ್ಲ. ಪುಸ್ತಕವು ಜೀರ್ಣವಾಗಿರುತ್ತದೆ, ಹೆಣ್ಣು ಭ್ರಷ್ಟಳಾಗಿರುತ್ತಾಳೆ, ಕೊಟ್ಟ ಹಣ ಪೂರಾ ವಾಪಾಸು ಬರದೆ ಅರ್ಧಂಬರ್ಧ ಬರುತ್ತದೆ' ಎಂದು ಈ ಸುಭಾಷಿತ ಹೇಳುತ್ತದೆ. ಇಲ್ಲಿ ಪುಸ್ತಕ ಹಾಗೂ ಹಣದ ಸಾಲಿನಲ್ಲಿ ಹೆಣ್ಣನ್ನೂ ಸೇರಿಸಿ ಸ್ತ್ರೀಯನ್ನು ಪುರುಷನ ಉಪಭೋಗದ ವಸ್ತುವನ್ನಾಗಿ ಮಾಡಿರುವುದು ಆಕ್ಷೇಪಾರ್ಹವಾದರೂ ನಂಬಿ ಮೋಸಹೋಗಬಾರದೆಂಬ ಎಚ್ಚರಿಕೆಯ ಕಿವಿಮಾತನ್ನಾಗಿ ಮಹಿಳೆಯರು ಗ್ರಹಿಸಬಹುದಾಗಿದೆ. ಅದೇನೇ ಇರಲಿ, ಈ ಸುಭಾಷಿತದಲ್ಲಿ ಪ್ರಸ್ತಾಪಿತಗೊಂಡಿರುವ ಮೂರು 'ವಸ್ತು'ಗಳಲ್ಲಿ ಕೊನೆಯದಾದ ಹಣದ ವಿಚಾರಕ್ಕೆ ಬಂದರೆ ಹಿಂದಿನವರ ಅನುಭವಕ್ಕಿಂತ ನಿಮ್ಮ ಅನುಭವ ಭಿನ್ನವಾಗಿಯೇನೂ ಇರಲಾರದು. 'ಕೊಟ್ಟೋನು ಕೋಡಂಗಿ, ಇಸ್ಕೊಂಡೋನು ಈರಭದ್ರ' ಎಂಬ ಗಾದೆ ಮಾತಿನಂತೆ 'ವಾಪಾಸ್ ಕೊಡಲ್ಲ, ಏನ್ ಮಾಡ್ಕೋತೀಯಾ ಮಾಡ್ಕೋ ಹೋಗು' ಎಂದು ದಬಾಯಿಸುವ 'ಈರಭದ್ರ'ರು ಈಗಲೂ ಇದ್ದಾರೆ. ಇನ್ನು ಸುಭಾಷಿತದ ಆರಂಭದಲ್ಲಿ ಪ್ರಸ್ತಾಪವಾದ ಪುಸ್ತಕಕ್ಕೆ ಬರೋಣ. ಈ ಸಂಸ್ಕೃತ ಸುಭಾಷಿತವು ಆಂಗ್ಲಭಾಷೆಯಲ್ಲಿರುವ ಈ ಮುಂದಿನ ನುಡಿಗಟ್ಟಿಗೆ ಪೂರಕವಾಗಿದೆ: "Never lend your books to others. The only books I have in my book-shelf are all borrowed from others!"

ಪುಸ್ತಕಗಳು ಪ್ರಾಚೀನ ಕಾಲದಲ್ಲಿ ಇರಲಿಲ್ಲ. ಆಗ ವಿಚಾರಗಳು ಬಾಯಿಂದ ಬಾಯಿಗೆ ಹರಡುತ್ತಿದ್ದವು. ಪ್ರಾಚೀನ ಗುರು-ಶಿಷ್ಯಪರಂಪರೆಯಲ್ಲಿ ಗುರುವಿನಿಂದ ಕೇಳಿದ ವಿಚಾರಗಳನ್ನು ಶಿಷ್ಯ ನೆನಪಿಟ್ಟುಕೊಂಡಷ್ಟು ಮಾತ್ರ ಉಳಿದುಕೊಂಡು ಬಂದವು. ಈ ಕಾರಣದಿಂದಾಗಿಯೇ ವೇದೋಪನಿಷತ್ತುಗಳು 'ಶ್ರುತಿ'ಗಳೆಂದೆನಿಸಿಕೊಂಡವು. ಜನಮಾನಸದಲ್ಲಿ ದಾಖಲಾಗದ ಎಷ್ಟೋ ವಿಚಾರಗಳು ಗಾಳಿಯಲ್ಲಿ ತೇಲಿಹೋದವು. ಗತಕಾಲದ ಜನರ ಮಾತುಗಳ 'ಧ್ವನಿತರಂಗ'ಗಳನ್ನು ಈಗಲೂ ಸೆರೆಹಿಡಿಯುವ ಸೂಕ್ಷ್ಮ ಉಪಕರಣವನ್ನೇನಾದರೂ ವಿಜ್ಞಾನಿಗಳು ಕಂಡುಹಿಡಿದರೆ ಅದೊಂದು ಅತ್ಯದ್ಭುತ ವೈಜ್ಞಾನಿಕ ಸಾಧನೆಯಾಗುವುದರಲ್ಲಿ ಸಂಶಯವಿಲ್ಲ.

ಮನುಷ್ಯನ ವಿಚಾರಗಳು ಬರಹರೂಪವನ್ನು ತಾಳಿ ಪುಸ್ತಕಗಳಾಗಿ ಪ್ರಕಟಗೊಳ್ಳಲು ಆರಂಭಗೊಂಡ ಕಾಲದಲ್ಲಿ ಉಂಟಾದ ಜನರ ಲೋಕಾನುಭವ ಈ ಮೇಲಿನ ಸೂಕ್ತಿಯಲ್ಲಿ ದಾಖಲಾಗಿದೆ. ಒಂದು ಕಾಲದ ಅನುಭವದ ಮಾತುಗಳು ಆಯಾಯ ಕಾಲದವರ ಸುದೀರ್ಘ ಅನುಭವದಿಂದ ಕೂಡಿದ್ದರೂ ಅವು ಮುಂದಿನ ಎಲ್ಲ ಕಾಲಮಾನಕ್ಕೂ ಅನ್ವಯಿಸುತ್ತವೆ, ಪ್ರಶ್ನಾತೀತವಾಗುವುದಿಲ್ಲ ಎಂದು ಹೇಳಲು ಬರುವುದಿಲ್ಲ. ಅದು ಅಂದಿನ ಕಾಲಮಾನದ ಪರಿಸ್ಥಿತಿಯಲ್ಲಿ ಬಾಳಿದ ಜನರ ಅನುಭವ. ಅದು ಹಾಗೆಯೇ ಸದಾ ಕಾಲ ಮುಂದುವರಿಯುತ್ತದೆಯೆಂದು ಹೇಳುವುದಕ್ಕಾಗಲೀ, ಮುಂದೆ ಅದು ಬದಲಾವಣೆ ಹೊಂದಿದರೆ ಹಿಂದಿನವರ ಅನುಭವ ಸುಳ್ಳು ಎಂದು ಆರೋಪಿಸುವುದಕ್ಕಾಗಲೀ ಬರುವುದಿಲ್ಲ.

ಈ ಹಿನ್ನೆಲೆಯಲ್ಲಿ ಮೇಲಿನ ಸೂಕ್ತಿ ನಾವಿಲ್ಲಿ ಹೇಳಲು ಹೊರಟಿರುವ ಪುಸ್ತಕಕ್ಕೆ ಅನ್ವಯಿಸುವುದಿಲ್ಲ. ಅದು ಸುಭಾಷಿತಕಾರನ ಅನುಭವಕ್ಕೆ ತದ್‍ವಿರುದ್ಧವಾಗಿ ಯಾರಿಗೆ ಕೊಟ್ಟರೂ ಹಾಳಾಗದ, ಹಿಂತಿರುಗಿ ಬರಲಾರದೆಂಬ ಚಿಂತೆಯಿಲ್ಲದ, ಎಂದೆಂದಿಗೂ ಮಾಸಲಾಗದ, ಪುಟಗಳು ಹರಿಯದೆ ಹೊಲಿಗೆ ಬಿಚ್ಚದೆ ಸದಾ ಗರಿಗರಿಯಾಗಿರುವ ಪುಸ್ತಕ. ಅದುವೇ 'ಇದು ನಿಚ್ಚಂ ಪೊಸತು' ಎಂಬ ಭಾವವನ್ನು ಮೂಡಿಸುತ್ತಾ ಅಂತರಜಾಲದಲ್ಲಿ ಓದುಗರ ಬೆರಳ ತುದಿಯಲ್ಲಿ ಶೋಭಿಸುವ e-book ಅಂದರೆ ಎಲೆಕ್ಟ್ರಾನಿಕ್ ಬುಕ್! ಅಂತಹ ಒಂದು ವಿದ್ಯುನ್ಮಾನ ಪುಸ್ತಕವೇ ಬಸವಣ್ಣನವರ ಆಯ್ದವಚನಗಳನ್ನು ಆಧರಿಸಿ ಇತ್ತೀಚೆಗೆ ನಾವು ಸಿದ್ಧಪಡಿಸಿರುವ **e-ವಚನಾಂಜಲಿ!** ನೀವು ಈ ಅಂಕಣ ಬರಹವನ್ನು ಓದಿದ ಮಾರನೆಯ ದಿನವೇ ಅಮೇರಿಕೆಯ ಕ್ಯಾಲಿಫೋರ್ನಿಯಾದಲ್ಲಿರುವ ಸಿಲಿಕಾನ್‍ವ್ಯಾಲಿ ಪ್ರದೇಶದ Palo Alto

- 2 -

ಎಂಬ ನಗರದಲ್ಲಿ ನಮ್ಮ ಸಮ್ಮುಖದಲ್ಲಿ ನಡೆಯಲಿರುವ 35ನೆಯ VSNA ವಾರ್ಷಿಕ ಸಮ್ಮೇಳನದಲ್ಲಿ ಅದರ ಲೋಕಾರ್ಪಣೆ.

ಬಸವಾದಿ ಶಿವಶರಣರ ವಚನಗಳು ಇಡೀ ಪ್ರಪಂಚದ ಜನರಿಗೆ ದೊರೆಯಬೇಕೆಂಬ ಬಹು ದೊಡ್ಡ ಕನಸು ಕಂಡವರು ನಮ್ಮ ಲಿಂಗೈಕ್ಯ ಗುರುವರ್ಯರಾದ ಶ್ರೀ ಶಿವಕುಮಾರ ಶಿವಾಚಾಯರ ಮಹಾಸ್ವಾಮಿಗಳವರು. ಅದಕ್ಕಾಗಿ ಅವರು ಬಸವಣ್ಣವರ ಸಮಗ್ರ ವಚನಗಳನ್ನು 1967 ರಲ್ಲಿ ಪ್ರೊಫೆಸರ್ ಮೆನೆಜೆಸ್ ಮತ್ತು ಅಂಗಡಿ ಅವರಿಂದ ಇಂಗ್ಲೀಷಿಗೆ ಅನುವಾದ ಮಾಡಿಸಿ ಮಠದಿಂದ ಪ್ರಕಟಿಸಿದ್ದರು. ಅವರ ಕನಸನ್ನು ಸಾಕಾರಗೊಳಿಸುವ ಮೊದಲ ಹೆಜ್ಜೆಯಾಗಿ ಸಮಗ್ರ ವಚನಗಳನ್ನೊಳಗೊಂಡ 'ಗಣಕ ವಚನಸಂಪುಟ' ಎಂಬ ಒಂದು ತಂತ್ರಾಂಶವನ್ನು (software) ನಾವು ಸಿದ್ಧಪಡಿಸಿದ್ದು ಅದರ ವಿಚಾರವಾಗಿ ಈ ಅಂಕಣದಲ್ಲಿ ಹಿಂದೆ ಬರೆಯಲಾಗಿದೆ. ವಿದ್ವಾಂಸರು ಮತ್ತು ಸಂಶೋಧಕರಿಗೆ ಉಪಯುಕ್ತವಾದ ಈ ತಂತ್ರಾಂಶವನ್ನು ಬಳಸಲು ಅಂತರಜಾಲ ತಾಣದಲ್ಲಿ ನೊಂದಾಯಿಸಬೇಕು, download ಮಾಡಿಕೊಳ್ಳಬೇಕು ಮತ್ತು install ಮಾಡಬೇಕು. ನಂತರವಷ್ಟೇ ಅದನ್ನು ಬಳಸಲು ಸಾಧ್ಯ. ಆದರೆ ಈಗ ಜನರಿಗೆ ಅಷ್ಟೊಂದು ಪುರುಸೊತ್ತು ಇಲ್ಲ. ಡಿಕಾಕ್ಷನ್‌ಗೆ ಹಾಲು ಮತ್ತು ಸಕ್ಕರೆ ಬೆರೆಸಿ ಕಾಫಿ ತಯಾರಿಸಿಕೊಂಡು ಕುಡಿಯುವಷ್ಟು ವ್ಯವಧಾನ ಅವರಿಗಿಲ್ಲ; ಅವರು ಬಯಸುವುದು: ಗುಂಡಿಯೊತ್ತಿದರೆ ಸಾಕು ದಿಢೀರನೆ ನೊರೆ ನೊರೆಯಾಗಿ ಬರುವ ಬಿಸಿ ಬಿಸಿ ಕಾಫಿ! ಇದನ್ನರಿತು ರೂಪಿಸಿದ ವಿದ್ಯುನ್ಮಾನ ಪುಸ್ತಕವೇ e-ವಚನಾಂಜಲಿ!

e-ವಚನಾಂಜಲಿಯಲ್ಲಿ ಬಸವಣ್ಣನವರ ವಚನಗಳನ್ನು ೧. ಸಂಸಾರ, ೨. ಸಮಾಜ, ೩. ಲಿಂಗಜಂಗಮ, ೪. ದೇವರು, ೫. ಸಾಧನೆ ಮತ್ತು ೬. ಮುಕ್ತಿ ಎಂದು ಆರು ಅಧ್ಯಾಯಗಳಾಗಿ ವಿಭಾಗಿಸಿ ಕೊಡಲಾಗಿದೆ. ಪ್ರತಿಯೊಂದು ಅಧ್ಯಾಯದಲ್ಲೂ ವಿಭಿನ್ನ ಶೀರ್ಷಿಕೆಗಳ ಅಡಿಯಲ್ಲಿ ವಚನಗಳನ್ನು ವರ್ಗೀಕರಿಸಲಾಗಿದೆ. ವಿಷಯಸೂಚಿಯನ್ನು ಕ್ಲಿಕ್ ಮಾಡಿದರೆ ಸಾಕು ಸಂಬಂಧಪಟ್ಟ ವಚನದ ಪುಟ ತೆರೆದುಕೊಳ್ಳುತ್ತದೆ. ಇಲ್ಲಿ ಪರಂಪರಾಗತವಾಗಿ ರೂಢಿಯಲ್ಲಿರುವಂತೆ ವಚನಗಳನ್ನು ಸ್ಥಲಾನುಸಾರ ವರ್ಗೀಕರಣ ಮಾಡಿಲ್ಲ. ಅದಕ್ಕೆ ಬದಲಾಗಿ ವಚನಗಳನ್ನು ಅವು ಒಳಗೊಂಡಿರುವ ವಿಷಯಗಳ ಪ್ರಕಾರ ವಿಂಗಡಿಸಿ ಕೊಟ್ಟಿದೆ. ಈ ಕ್ರಮದಲ್ಲಿ ವಚನಗಳನ್ನು ಓದುವುದರಿಂದ ಆಯಾ ವಿಷಯಗಳನ್ನು ಕುರಿತ ಬಸವಣ್ಣನವರ ವಿಚಾರಧಾರೆಯನ್ನು ಸುಲಭವಾಗಿ ಗ್ರಹಿಸಬಹುದಾಗಿದೆ; ಓದುಗರು ತಮಗೆ ತಾವೇ ಮೂಲ ವಚನಗಳ ಬೆಳಕಿನಲ್ಲಿ ಹೊಸ ಚಿಂತನೆಯನ್ನು ಮಾಡಬಹುದಾಗಿದೆ.

ಓದುಗರು 'e-ವಚನಾಂಜಲಿ' ಪುಸ್ತಕವನ್ನು ನಮ್ಮ ಮಠದ ಅಂತರಜಾಲ ತಾಣದಿಂದ (www.taralabalu.org) ಯಾವುದೇ ಶುಲ್ಕವಿಲ್ಲದೆ ಉಚಿತವಾಗಿ ಪಡೆಯಬಹುದು.

5.7.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑